ಪಾಶ್ಚಾತ್ಯ ಉಡುಗೆ ಎಂದೆನಿಸಿಕೊಂಡಿದ್ದ ಸ್ಕರ್ಟ್ ಈಗ ಸಾಂಪ್ರದಾಯಿಕ ಲೇಪನ ಬಳಿದುಕೊಂಡು ಮದುವೆ ಮತ್ತಿತರ ಸಮಾರಂಭಗಳಿಗೂ ಸೈ ಎನಿಸಿಕೊಳ್ಳುತ್ತಿದೆ. ತೊಡೆ ಮಟ್ಟದಿಂದ ಹಿಡಿದು ನೆಲ ಗುಡಿಸುವವರೆಗಿನ ಸ್ಕರ್ಟ್‌ಗಳು ಫ್ಯಾಷನ್ ಜಗತ್ತಿನಲ್ಲಿ ಮೋಡಿ ಮಾಡಿವೆ.

# ಟ್ರೆಂಡಿ ಸ್ಕರ್ಟ್

## ನೋಡಿ ಇದರ ಗತ್ತು!





■ ಸುಮಾ ಬಿ.

ಐಪಿಎಲ್ ಕ್ರಿಕೆಟ್‌ನ ಆರಂಭದಲ್ಲಿ ತಂಡದ ಆಟಗಾರರು ಹಾಗೂ ಆಟಕ್ಕಿಂತಲೂ ಹೆಚ್ಚು ಜನಾಕರ್ಷಣೆಗೆ ಒಳಗಾದವರು ಚೀರ್ ಗರ್ಲ್ಸ್. ಅವರು ಧರಿಸುವ ಮಿನಿ ಸ್ಕರ್ಟ್ ಹಾಗೂ ಹೆಮ್‌ಲೈನ್‌ಗಳು ಬಹುಜನರನ್ನು ಆಕರ್ಷಿಸಿದವು. ಈಗಲೂ ಚೀರ್ ಗರ್ಲ್ಸ್ ಎಂದರೆ ಸಾಕು ಮಿನಿ ಸ್ಕರ್ಟ್ ಹಾಗೂ ಅವರ ಕೈಯಲ್ಲಿನ ಮಿಂಚಿನ ಚುಂಗು ಸ್ಮೃತಿಪಟಲದಲ್ಲಿ ಸುಳಿಯುತ್ತವೆ. ಫ್ಯಾಷನ್ ಜಗತ್ತಿನಲ್ಲಿ ಮಿಂಚಿ ಮರೆಯಾಗಿದ್ದ ಸ್ಕರ್ಟ್, ಮಿನಿಸ್ಕರ್ಟ್‌ಗಳು ಆಗ ಮತ್ತೆ ಮುನ್ನೆಲೆಗೆ ಬಂದವು. ಅವರ ನೃತ್ಯಕ್ಕೆ ಅನುಸಾರ ಬಳುಕಿ, ಕುಲುಕುತ್ತಿದ್ದ ಮಿನಿ ಸ್ಕರ್ಟ್ ಫ್ಯಾಷನ್ ಪ್ರಿಯರ ಮನಸೆಳೆಯಿತು. ಈಗಂತೂ ಥರಾವರಿ ಸ್ಕರ್ಟ್‌ಗಳು ಲಲನೆಯರ ಆಲಂಗಿಸುತ್ತಿವೆ.

ಪಾಶ್ಚಿಮಾತ್ಯ ಶೈಲಿಯ ಈ ಉಡುಪು ಪಾರ್ಟಿ, ಔಟಿಂಗ್, ಟ್ರಿಪ್‌ಗಳಿಗೆ ಸೀಮಿತವಾಗಿತ್ತು. ಈಗ ಸಾಂಪ್ರದಾಯಿಕ ಲೇಪನದಿಂದ ಮದುವೆ ಮತ್ತಿತರ ಸಮಾರಂಭಗಳಿಗೂ ಸೈ ಎನಿಸಿಕೊಳ್ಳುತ್ತಿದೆ. ತೊಡೆ ಮಟ್ಟದಿಂದ ನೆಲ ಗುಡಿಸುವವರೆಗಿನ ಸ್ಕರ್ಟ್‌ಗಳು ಫ್ಯಾಷನ್ ಜಗತ್ತಿನಲ್ಲಿ ಮೋಡಿ ಮಾಡಿವೆ. ಯಾವುದೋ ಟಾಪ್ ಜೊತೆ ಇನ್ನಾವುದೋ ಸ್ಕರ್ಟ್ ತೊಟ್ಟು ಮಿಕ್ಸ್ ಅಂಡ್ ಮ್ಯಾಚ್ ಮಾಡಿಕೊಂಡು ಟ್ರೆಂಡಿಯಾಗಿ ಕಾಣಿಸಿಕೊಳ್ಳಬಹುದು. ಫ್ಯಾಷನ್‌ಪ್ರಿಯರ ವಾರ್ಡ್‌ರೋಬ್‌ನಲ್ಲಿ ಸ್ಕರ್ಟ್‌ಗೆ ಅಗ್ರಸ್ಥಾನ. ಮಿನಿ, ಮಿಡಿ, ಮ್ಯಾಕ್ಸಿ ಸ್ಕರ್ಟ್‌ಗಳು ಕಾಲಕಾಲಕ್ಕೆ ವಿನ್ಯಾಸವನ್ನು ಬದಲಾಯಿಸುತ್ತ ಆಕರ್ಷಣೀಯವಾಗುತ್ತಿವೆ. ಫ್ಯಾಷನ್‌ಪ್ರಿಯರಿಗೆ ಇಲ್ಲಿ ಆಯ್ಕೆಗಳು ಹಲವು.

### ಮಿನಿ ಸ್ಕರ್ಟ್

ಜೀನ್ಸ್, ಲೆದರ್, ವುಲನ್ ಸೇರಿ ಯಾವುದೇ ದಪ್ಪಗಿನ ಬಟ್ಟೆಯಲ್ಲಿ ಮಿನಿ ಸ್ಕರ್ಟ್ ವಿನ್ಯಾಸ ಒಪ್ಪ ಓರಣವಾಗಿ ಕಾಣುತ್ತದೆ. ಮೊಣಕಾಲಿನಿಂದ ಐದಾರು ಇಂಚು ಮೇಲಕ್ಕಿರುವ ಈ ಸ್ಕರ್ಟ್‌ಗಳು ಪಾಶ್ಚಾತ್ಯ ಶೈಲಿಯ ಲುಕ್ ನೀಡುತ್ತವೆ. ಕಾಲುಗಳನ್ನು ಶೋ–ಆಫ್ ಮಾಡಲು ಬಯಸುವವರಿಗೆ ಈ ಸ್ಕರ್ಟ್‌ಗಳು ಹೆಚ್ಚು ಹೊಂದುತ್ತವೆ. ಡೆನಿಮ್ ಮಿನಿ ಸ್ಕರ್ಟ್, ಲೆದರ್ ಮಿನಿ ಸ್ಕರ್ಟ್‌ಗಳು ಹೆಚ್ಚು ಜನಪ್ರಿಯ. ಹುಟ್ಟುಹಬ್ಬದ ಪಾರ್ಟಿ, ಔಟ್ ಡಿನ್ನರ್, ನೈಟ್ ಪಾರ್ಟಿ, ವಾರಾಂತ್ಯದ ಪಾರ್ಟಿಗಳಿಗೆ ಹೆಚ್ಚು ಸೂಕ್ತ. ಸ್ಕರ್ಟ್‌ಗೆ ತಕ್ಕನಾಗಿ ಟಾಪ್ ತೊಟ್ಟು ಬೀಗಬಹುದು.